# ಮಳೆಗಾಲಕ್ಕೆ ಮುನ್ನ

ಭೂಮಿ ಎನ್ನುವುದು ಅದ್ಭುತ ಸೃಷ್ಟಿ! ಭೂಮಿಯ ಸೃಷ್ಟಿಯ ಬಗ್ಗೆ ಪರಿಸರ ವಿಜ್ಞಾನಿಗಳು, ಭೂಗರ್ಭಶಾಸ್ತ್ರಜ್ಞರು, ಇವರ ಜೊತೆಗೆ ವೇದ, ಶಾಸ್ತ್ರ ಚೂಡಾಮಣಿಗಳು ಬಗೆ ಬಗೆಯ ವಾದ, ತರ್ಕ ಹಾಗೂ ಕಲ್ಪನೆಗಳನ್ನು ನಮ್ಮ ಮುಂದಿಟ್ಟಿದ್ದಾರೆ! ಸದ್ಯಕ್ಕೆ ಇವನ್ನೆಲ್ಲಾ ಒಂದು ಬದಿಗೆ ಸರಿಸೋಣ. ಆದರೂ ಈ ಅದ್ಭುತ ಸೃಷ್ಟಿಯ ಭೂಮಿಯನ್ನು ಅರ್ಥೈಸಿಕೊಳ್ಳುವಲ್ಲಿ ಮಾನವ ಸೋತಿದ್ದಾನೆ. ಆಧುನಿಕತೆ ಮತ್ತು ತಂತ್ರಜ್ಞಾನದ ಕ್ಷಿಪ್ರ ಬೆಳವಣಿಗೆಯನ್ನು ಕಾಣಲು ಕಾತುರವಾಗಿರುವ ಜಗತ್ತಿನ ಸ್ಥಿತಿ ಇಂದು 'ನೀರಹಾವನ್ನು ಚುಂಬಿಸಲು ಹೊರಟ ಕಪ್ಪೆಯಂತಾಗಿದೆ!' ಅಭಿವೃದ್ಧಿಯ ಮೃತ್ಯುರೂಪವನ್ನು ಹೇಳುವ ಈ ರೂಪಕ ಆಧುನಿಕತೆಗೆ ಮರುಳಾಗಿರುವ ಜನತೆಯ ಮನೋಭಾವವನ್ನು ತೆರೆದಿಡುತ್ತದೆ.

'ಈಗ ಬೇಸಗೆ, ಬೀದಿ ತುಂಬ ಕಾದಿದೆ ಮರಳು / ಅಲ್ಲಿ ನಡೆವುದು ಹೇಗೆ ಎಂದುಕೊಂಡೆ: / ಬಾಂದಳದ ತನಕ ಹಬ್ಬಿತ್ತು ಮರಳಿನ ರಾಶಿ...' ಕೆಎಸ್‌ನ ಅವರ ಕವಿತೆಯಂತೆಯೇ ಈ ಸಲದ ಬೇಸಗೆ ನಿಜಕ್ಕೂ ಭೂಮಿಯನ್ನು ಬೇಯುವ ಆವಿಗೆಯನ್ನಾಗಿಸಿದೆ! ಕೆರೆಕಟ್ಟೆ, ನದಿಗಳು ಬಸವಳಿದಿವೆ. ನೀರಿನ ಮಹತ್ವ ಈಗಾಗಲೇ ಜನರ ಅರಿವಿಗೆ ಬರುತ್ತಿದೆ! ವಸಂತಮಾಸ ಚಿಗುರಿಸಿದ್ದ ಗಿಡ ಮರಗಳು ನಿಧಾನವಾಗಿ ತಮ್ಮ ಬಣ್ಣ ಕಳೆದುಕೊಳ್ಳುತ್ತಿವೆ. ಭೂಮಿ ಎನ್ನುವುದು ತರಗೆಲೆಯಂತಾಗುತ್ತಿದೆ. ಅಭಿವೃದ್ಧಿಯ ವಿರೋಧಾಭಾಸಗಳು ತಮ್ಮ ಅಸಲಿ ಮುಖಗಳನ್ನು ನಮ್ಮ ಮುಂದೆ ರಾಕ್ಷಸಾಕಾರವಾಗಿ ತೆರೆದಿಡುತ್ತಿವೆ. ಅಭಿವೃದ್ಧಿ ಎನ್ನುವುದು ಇಂದು ಸಂಪತ್ತಿನ ಕ್ರೋಢೀಕರಣದ ಉದ್ದಿಮೆಯಾಗಲು ಉತ್ತೇಜಿಸುತ್ತಿದೆ. ಇದರ ಫಲವಾಗಿಯೇ ಪ್ರಕೃತಿ ನಮಗೆ ನೀಡಿದ ಉಡುಗೊರೆಗಳೆಲ್ಲ ಒಂದೊಂದಾಗಿ ಕಣ್ಮರೆಯಾಗುತ್ತಿವೆ. ಇವುಗಳೆಲ್ಲದರ ಹಿಂದೆ ನಿಸರ್ಗ ಕೇವಲ ಮನುಷ್ಯ ಬಳಸಬಹುದಾದ ಸೊತ್ತು ಎಂಬ ವಿವೇಕಹೀನ ಚಿಂತನೆಯೇ ಕಾರಣ! ಸಂಪತ್ತನ್ನು ವೃದ್ಧಿಸಿಕೊಳ್ಳುವುದು ತಪ್ಪಲ್ಲ! ಆದರೆ ಅದಕ್ಕೇ ಅಂಟಿಕೊಳ್ಳುವುದು ಎಲ್ಲ ರೋಗದ ಮೂಲ. ಸಂಪತ್ತನ್ನು ನಾಳೆಗಾಗಿ ಅಳತೆ ಮೀರಿ ಸಂಗ್ರಹಿಸಿಕೊಳ್ಳುವುದರಿಂದ ಮನುಷ್ಯನ ಸ್ವಾರ್ಥದ ಬೇರುಗಳು ಆಳಕ್ಕೆ ಇಳಿಯುತ್ತವೆ. ಈ ಎಲ್ಲ ರೋಗದ ಮೂಲ, ಮನಸ್ಸು. ನಮ್ಮ ಮನಸ್ಸಿನಲ್ಲಿ ಬೇರೂರಿರುವ ವಸ್ತುಲೋಕದ ಬಗೆಗಿನ ದಾಹವನ್ನು ಇಲ್ಲವಾಗಿಸಿಕೊಳ್ಳುವುದರ ಮೂಲಕವೇ ನಿಯಂತ್ರಿಸಬೇಕು. ಈ ಹಿನ್ನೆಲೆಯಲ್ಲಿ ಬುದ್ಧವಚನವೊಂದು ಹೀಗೆ ಹೇಳುತ್ತದೆ 'ಬಂಧುಗಳೇ ನನ್ನ ಸೇವೆ ಮಾಡಬೇಕೆನ್ನುವವರು ರೋಗಿಗಳ, ಹಸಿದವರ ಮತ್ತು ಆಸರೆ ತಪ್ಪಿದವರ ಸೇವೆ ಮಾಡಲಿ. ಯಾವ ತೆರನಾದ ಬೀಜಗಳನ್ನಾಗಲಿ, ಮರಗಳನ್ನಾಗಲಿ ಸಂಹಾರಮಾಡದೆ ವಾಸಿಸುವವನು, ಅನ್ನ, ಪಾನ, ವಸ್ತ್ರ ಯಾವುದನ್ನೂ ಕೂಡಿಟ್ಟುಕೊಳ್ಳದಿರುವವನು ನನ್ನ ಸೇವೆ ಮಾಡಲಿ. ಶೀಲಸಂಪನ್ನರಾಗುವುದು ಎಂದರೆ ಇದೇ.' ಬೌದ್ಧ ದರ್ಶನದ ಪ್ರಕಾರ ಸರಳತೆ ಮತ್ತು ಅಹಿಂಸೆ ಮನುಷ್ಯನನ್ನು ಪರಿಶುದ್ಧವಾಗಿಡಲು ಪ್ರೇರಕವಾಗುತ್ತದೆ.

ಇಂದು ಪರಿಸರ ಸಂರಕ್ಷಣೆಯ ವ್ಯಾಖ್ಯಾನವೂ ಬದಲಾಗಿದೆ. ಜೀವವೈವಿಧ್ಯತೆಯ ಅರಣ್ಯ, ನೀರು, ಮಣ್ಣು, ಬೆಟ್ಟ ಗುಡ್ಡಗಳ ಜೊತೆ ಅರಣ್ಯವಾಸಿಗಳ ಸಾಮಾಜಿಕ ಬದುಕು ಮತ್ತು ಅವರ ನಿರುಪದ್ರವಿ ಸಂಸ್ಕೃತಿಯನ್ನು ಜತನ ಮಾಡುವುದು ಪರಿಸರ ಸಂರಕ್ಷಣೆಯ ಭಾಗವೂ ಆಗಿದೆ. ಲಡಾಖ್‌ನ ಹಿಮಾಲಯ ಪರ್ವತ ಪ್ರದೇಶಗಳಲ್ಲಿ ಅಪಾರ ಪ್ರಮಾಣದಲ್ಲಿರುವ ನಿಕ್ಷೇಪ ಹಾಗೂ ಸ್ಥಳೀಯ ಸಂಸ್ಕೃತಿಯ ಉಳಿವಿಗಾಗಿ 21 ದಿನಗಳ ಉಪವಾಸ ಸತ್ಯಾಗ್ರಹ ನಡೆಸುತ್ತಿರುವ ಸೋನಂ ವಾಂಗ್‌ಚುಕ್ ಮತ್ತು ಅವರ ಸಂಗಾತಿಗಳ ಹೋರಾಟವೂ ಕೂಡ ಅಸೂಕ್ಷ್ಮ ವ್ಯವಸ್ಥೆಯ ವಿರುದ್ಧವಾಗಿದೆ. 'ಲಡಾಖ್‌ನ ಮಗ್ಗುಲಲ್ಲಿರುವ 40 ಸಾವಿರ ಎಕರೆ ಭೂಮಿಯಲ್ಲಿ ಸೋಲಾರ್ ವಿದ್ಯುತ್ ಉತ್ಪಾದನೆಗಾಗಿ ಸರ್ಕಾರ ಎಸ್‌ಸಿಸಿಐ ಕಂಪನಿಗೆ ನೀಡಿದೆ. ಈ ಪ್ರದೇಶದ ವಿಸ್ತಾರವಾದ ಹುಲ್ಲುಗಾವಲಿನಲ್ಲಿ ವಿಶ್ವಪ್ರಸಿದ್ಧ 'ಪಶ್ಮೀನಾ' ತುಪ್ಪಳ ಕೊಡುವ ಮೇಕೆ ಸಾಕಾಣಿಕೆ ಮಾಡಿಕೊಂಡಿದ್ದ ಜಂಗ್‌ಫಾ ಜನಾಂಗ ಈಗ ಬೀದಿಪಾಲಾಗಿದೆ. ಇದರಿಂದ ಪುರಾತನ ಸಂಸ್ಕೃತಿಯೊಂದು ಆತ್ಮಹತ್ಯೆಗೆ ಸಿದ್ಧವಾಗಿದೆ. ಇದಕ್ಕೆ ಯಾರನ್ನು ಹೊಣೆ ಮಾಡುವುದು..?

ಗಣಿಗಾರಿಕೆಯ ವಿಷಯಕ್ಕೆ ಬಂದರೆ, ಕಾರ್ಪೊರೇಟ್ ಉದ್ಯಮಿಗಳು ಪರ್ವತಗಳನ್ನು ಕೆಡವಿ ಲೀಥಿಯಂ ಅಥವಾ ಚಿನ್ನವನ್ನೇ ಬಾಚಬಹುದು. ಇದನ್ನು ಅಭಿವೃದ್ಧಿ ಎಂದೂ ಕರೆಯಬಹುದು. ಆದರೆ, ಇವೆಲ್ಲಾ ಕೇವಲ ಕ್ಷಣಿಕ ಲಾಭ ತರುವ ದೂರದೃಷ್ಟಿಯಿಲ್ಲದ ಆಲೋಚನೆಗಳು. ಈ ಪರ್ವತಗಳು ಬೃಹದಾಕಾರವಾಗಿ ಕಂಡರೂ ಅತ್ಯಂತ ಸೂಕ್ಷ್ಮ ಅಡಿಪಾಯವಿಲ್ಲದೆ ನಿಂತಿರುವ ಮರಳುಗುಡ್ಡೆಗಳಂತೆ, ಅಲ್ಲದೆ ಗಣಿಗಾರಿಕೆಯಿಂದ ಹೊರಬರುವ ಇಂಗಾಲ ಮತ್ತು ದೂಳಿನ ಕಣಗಳು ಪರ್ವತಗಳ ನೆತ್ತಿಯಲ್ಲಿರುವ ಹಿಮಗಡ್ಡೆಗಳ ಕರಗುವಿಕೆಯನ್ನು ಹಲವು ಪಟ್ಟು ಹೆಚ್ಚಿಸುತ್ತವೆ. ಇದರಿಂದಾಗುವ ದುರ್ಘಟನೆಗಳ ಸರಮಾಲೆಯನ್ನು ಊಹಿಸಲಸಾಧ್ಯ. ಇದೇ ಹಿಮಗಡ್ಡೆಗಳಿಂದ ಹುಟ್ಟುವ ಹಲವಾರು ನದಿಗಳು, ಹಲವಾರು ರಾಜ್ಯಗಳನ್ನು ದಾಟಿ ಸಾಗುತ್ತವೆ. ಇವುಗಳ ಮೌಲ್ಯವನ್ನು ಎಂದಾದರೂ ಅಂದಾಜಿಸುವುದು ಸಾಧ್ಯವೆ' (ಕೃಪಾಕರ ಸೇನಾನಿ). ಸೋನಂ ವಾಂಗ್‌ಚುಕ್ ಅವರ ಕಾಳಜಿಗೆ ಗಮನಕೊಡಲಾಗದಷ್ಟು ನಮ್ಮ ಆಡಳಿತ ವ್ಯವಸ್ಥೆ ಕಿವುಡಾಗಿದೆ. ಕೆಲವು ವರ್ಷಗಳ ಹಿಂದೆ ಕರ್ನಾಟಕದ ಸಂಡೂರಿನ ಬಳಿಯ ತಿಮ್ಮಪ್ಪನ ಗುಡ್ಡದಲ್ಲಿ ಕಾಡುಗೊಲ್ಲ ಮಹಿಳೆಯೊಬ್ಬಳು ಹೇಳಿದ ಮಾತುಗಳು ನೆನಪಾಗುತ್ತದೆ 'ಈ ಗಿಡ ಮರ ಕಡಿದರೆ, ಅವನ್ನು ಬೆಳೆಸಬಹುದು! ಆದರೆ ಈ ಬೆಟ್ಟ ಗುಡ್ಡಗಳನ್ನೇ ಕಡಿದರೆ ಅವನ್ನು ಮತ್ತೆ ಬೆಳೆಸೋಕೆ ಸಾಧ್ಯವೆ?' ಈ ವಿವೇಕ ಪ್ರಕೃತಿಯ ಮೇಲಿನ ದಾಳಿಗೆ ಇಳಿದಿರುವ, ಸಂಪತ್ತು ಮತ್ತು ಅಧಿಕಾರದ ಮೋಹಕ್ಕೆ ಒಳಗಾಗಿರುವವರಿಗೆ ತಲುಪುವುದೆ?

ಯುದ್ಧ, ಹಸಿವು ಮತ್ತು ಪ್ರಕೃತಿಯ ಸಂಪತ್ತಿನ ದೋಚುವಿಕೆ ಈ ಶತಮಾನದ ಮುಖ್ಯ ಸಮಸ್ಯೆಗಳಿಗೆಲ್ಲ ಮೂಲ ಕಾರಣ. ಇವುಗಳಿಗೆಲ್ಲ ಕಿವಿ ಮತ್ತು ಕಣ್ಣಿಲ್ಲದ ಸಂವೇದನಾರಹಿತವಾದ ಕೆಟ್ಟ ರಾಜಕೀಯ ನಿರ್ಧಾರಗಳೇ ಕಾರಣ ಎಂದು ಜಗತ್ತಿನ ಪರಿಸರ ವಿಜ್ಞಾನಿಗಳು ಹೇಳುತ್ತಿದ್ದಾರೆ! ಇದಕ್ಕಾಗಿ ಹೊರಳು ದಾರಿಯೊಂದನ್ನು ನಾವು ಕಂಡುಕೊಳ್ಳಬೇಕಿದೆ. ಸುಂದರಲಾಲ್ ಬಹುಗುಣ ಅವರು ಗಾಂಧಿ ಚಿಂತನೆಯನ್ನೇ ತಿರುಗಿಸಿ ನಮಗೆ ಹೇಳಿದ್ದಾರೆ. 'ಗಾಂಧೀ ಪ್ರತಿಪಾದಿಸಿದ ಕ್ರಾಂತಿ ಎಂದರೆ, ಅಧಿಕಾರದ ಬದಲು ಸೇವೆ, ಸಂಪತ್ತಿನ ಬದಲು ಸರಳತೆ, ಶಸ್ತ್ರದ ಬದಲು ಶಾಂತಿಯನ್ನು ಬಯಸುವುದು.' ನಿಜವಾದ ಅಭಿವೃದ್ಧಿ ಎಂದರೆ ಇದೇ. ಈ ಮಳೆಗಾಲಕ್ಕೆ ಮುನ್ನ ನಮಗಿರಬೇಕಾದ ತಿಳಿವು ಇದು.

■ **ಜೆ.ವಿ. ಆನಂದಮೂರ್ತಿ**

## ಮಾತೇ ಮುತ್ತು

- ಒಳ್ಳೆಯ ಬರಹಗಾರ ತನ್ನ ವಿರುದ್ಧ ತಾನೇ ಯೋಚಿಸಬಲ್ಲವ. ಕೆಟ್ಟ ಬರಹಗಾರ ತನ್ನನ್ನು ಬಿಟ್ಟರೆ ಇಲ್ಲ ಅಂತ ತಿಳಿದುಕೊಂಡಿರುತ್ತಾನೆ.
  —ಕುವೆಂಪು
- ದೇವಸ್ಥಾನಗಳಿಗಿಂತ ಗ್ರಂಥಾಲಯಗಳು ಮಹತ್ವವೆಂದು ನಮ್ಮ ಜನರಿಗೆ ಅನ್ನಿಸುವುದು ಯಾವಾಗ?
  —ಜಿ.ಎಸ್. ಶಿವರುದ್ರಪ್ಪ
- ಯಾವುದಿಹವೋ, ಬಂಧನವೋ, ಭ್ರಾಂತಿಯೋ ಅದಾಗಲಿ ನನ್ನ ನೆಲೆ/ ಯಾವುದನುಭವದ ಸಹಜ ಕ್ರಾಂತಿಯೋ ಅದಾಗಲಿ ನನ್ನ ಕಲೆ.
  —ಕೆ.ಎಸ್. ನರಸಿಂಹಸ್ವಾಮಿ
- ಬದುಕು ಮತ್ತು ಬಾಳು ಬೇರೆ ಬೇರೆ— ಬದುಕು ವೃದ್ಧಿ, ಬಾಳು ಸಿದ್ಧಿ.
  —ದ.ರಾ. ಬೇಂದ್ರೆ
- ಜೀವನದಿಂದಲೇ ದೇವರು ಉದ್ಭವಿಸಬೇಕು, ಬೆಳೆಯಬೇಕು. ಎಷ್ಟು ಎಷ್ಟು ನಮ್ಮ ಜೀವನ ಹಿರಿದೋ ಅಷ್ಟು ಅಷ್ಟು ದೇವರೂ ಹಿರಿದು.
  —ಶಿವರಾಮ ಕಾರಂತ
- ದುಡ್ಡು ಅಂದರೆ ದುಡಿದು ತರಬೇಕಾದ ವಸ್ತು.
  —ನಾ. ಕಸ್ತೂರಿ
- ತುಕ್ಕು ಹಿಡಿದು ಹೋಗಬೇಡ, ತೇದು ಹೋಗು.
  —ಸರ್ ಎಂ. ವಿಶ್ವೇಶ್ವರಯ್ಯ
- ಅರಿತು ಮಾಡಿದ್ದು ಪಾಪ, ಮರೆತು ಮಾಡಿದ್ದು ಮನುಷ್ಯ ಸ್ವಭಾವ.
  —ತರಾಸು